KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ಸಂಖ್ಯೆ: 87/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ರೇಣುಕಪ್ರಸಾದ್.ಜಿ. | | ಪಿ.ಡಬ್ಲ್ಯೂ. | 12 |
| ತಂದೆಯ ಹೆಸರು | : ಗಂಗಾಧರ.ಜಿ.ಕೆ. | | ಸಿ.ಡಬ್ಲ್ಯೂ. | 05 |
| ವಯಸ್ಸು | : 36 ವರ್ಷ | | | |
| ಉದ್ಯೋಗ | : ವ್ಯಾಪಾರ | | | |
| ವಾಸಸ್ಥಳ | : ಅರಸೀಕೆರೆ | | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿ: 10-04-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ಮೃತ ತಮ್ಮಯ್ಯ, ಚಾಸಾ.1, 6 ಹಾಗೂ ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಕಾಣುತ್ತಿರುವ ಆರೋಪಿ ನನ್ನ ಹೆಂಡತಿಯ ದೂರದ ಸಂಬಂಧಿಕರು. ಚಾಸಾ.4 ನನಗೆ ಗೊತ್ತು.

2. ಈಗ ನೋಡುತ್ತಿರುವ ನಿಶಾನೆ ಪಿ.20 ಮತ್ತು ಪಿ.21 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.20(ಬಿ) ಮತ್ತು ನಿಶಾನೆ ಪಿ.21(ಬಿ) ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ತಮ್ಮಯ್ಯರವರ ಶವ ಬಿಡುಗಡೆ ಮಾಡುವ ಸಂಬಂಧ ನಿಶಾನೆ ಪಿ.20 ಮತ್ತು ಪಿ.21 ಕ್ಕೆ ನಾನು ಮತ್ತು ಚಾಸಾ.4 ರವರು ರುಜು ಮಾಡಿರುತ್ತೇವೆ. ನಿಶಾನೆ ಪಿ.21 ಮಹಜರನ್ನು

ಬರೆದ ಸಮಯ ನನಗೆ ಗೊತ್ತಿಲ್ಲ. ನಿಶಾನೆ ಪಿ.*20* ಮತ್ತು ಪಿ.*21* ರಲ್ಲಿ ಬರೆದ ಮಾಹಿತಿ ನನಗೆ ಗೊತ್ತಿಲ್ಲ.

3. ಈಗ ನೋಡುತ್ತಿರುವ ನಿಶಾನೆ ಪಿ.*12* ಮತ್ತು ಪಿ.*13* ನನ್ನ ಸಹಿ ಇರುತ್ತದೆ. ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.*12(ಬಿ)* ಮತ್ತು ಪಿ.*13(ಬಿ)* ಎಂದು ಗುರುತಿಸಲಾಯಿತು. ಆಸ್ಪತ್ರೆಯಲ್ಲಿ ನಿಶಾನೆ ಪಿ.*12* ಮತ್ತು ಪಿ.*13* ಕ್ಕೆ ಸಹಿ ಮಾಡಿರುತ್ತೇನೆ. ನಿಶಾನೆ ಪಿ.*12* ಮತ್ತು ಪಿ.*13* ರಲ್ಲಿ ಬರೆದ ಮಾಹಿತಿ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಈಗ ನೋಡುತ್ತಿರುವ ಮು.ಮಾ.*1* ರಿಂದ *5* ನ್ನು ನಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿಲ್ಲ. ನಿಶಾನೆ ಪಿ.*12* ಮತ್ತು ಪಿ.*13* ಕ್ಕೆ ಶವ ಪಂಚನಾಮೆ ಮಾಡುವ ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಮು.ಮಾ.*1* ರಿಂದ *5* ರ ಮೇಲೆ ಸಾಕ್ಷಿ ಗುರುತು ಹಿಡಿದ ಸಹಿಯನ್ನು ಮು.ಮಾ.*1(ಬಿ)* ರಿಂದ *5(ಬಿ)* ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಮಹಜರಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

*4.* ದಿಃ *18-01-2021* ರಂದು ತನಿಖಾಧಿಕಾರಿಯು ಶವ ಪಂಚನಾಮ ಮಾಡಿದಾಗ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯನ್ನು ಬೆಳಗ್ಗೆ *8* ರಿಂದ *10.30* ರವರೆಗೆ ಬರೆದಿರುತ್ತಾರೆ ಎಂದರೆ ಸರಿ. ನಂತರ ದಿಃ *22-01-2021* ರಂದು ನನಗೂ ಹಾಗೂ ಚಾಸಾ.*15* ರವರಿಗೆ ನಿಪಿ.*12* ರಂತೆ ನೋಟೀಸ್ ನೀಡಿ

ನಮ್ಮಗಳ ಸಮಕ್ಷಮ ಮೃತರ ಶವ ಪೇರಿಕ್ಷೆಯ ಸಮಯದಲ್ಲಿ ವೈದ್ಯರು ಸಂಗ್ರಹಿಸಿ ಕೊಟ್ಟ ಮು.ಮಾ.*1* ರಿಂದ *5* ವಸ್ತುಗಳನ್ನು ನಿಪಿ.*13* ರಂತೆ ಮಹಜರ ಮಾಡಿ ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ.*15* ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಇಂಜಿನಿಯರಿಂಗ್ ಪದವೀಧರ. ನನಗೆ ಕನ್ನಡ ಬರೆಯಲು ಮತ್ತು ಓದಲು ಬರುತ್ತದೆ. ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ರುಜು ಮಾಡುವ ಮೊದಲು ಓದಿ ತಿಳಿದುಕೊಳ್ಳದೇ ರುಜು ಮಾಡುತ್ತೇನೆ ಎಂದರೆ ಸರಿ. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ

*5.* ನಾನು ಶವಗಾರಕ್ಕೆ ಹೋದಾಗ ಮೃತ ಹತ್ತಿರದ ಸಂಬಂಧಿಯರು ಯಾರು ಶವವನ್ನು ತಮ್ಮ ವಶಕ್ಕೆ ಪಡೆಯಲು ಮುಂದೆ ಬರಲಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಶವವನ್ನು ಹಸ್ತಾಂತಿರಿಸಿದ ನಂತರ ನನ್ನ ಸಹಿಗಳನ್ನು ಹಲವಾರು ದಾಖಲೆಗಳಿಗೆ ಪಡೆದುಕೊಂಡರು ಎಂದರೆ ಸರಿ. ನಾನು ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).*

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

Visit **ecourts.gov.in** for updates or download mobile app “**eCourts Services**” from Android or iOS